IJCRT.ORG ISSN : 2320-2882
INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# “ಭಾರತದಲ್ಲಿ ಶೈಕ್ಷಣಿಕ ಅಸ್ಮಿತೆ ಮತ್ತು ಸಂವಿಧಾನಾತ್ಮಕ ಅವಕಾಶಗಳು”

ಹರೀಶ ಎಂ. ಆರ್.
ಅತಿಥಿ ಉಪನ್ಯಾಸಕರು,
ರಾಜ್ಯಶಾಸ್ತ್ರ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ,
ಚಿಕ್ಕಮಗಳೂರು (ಜಿಲ್ಲೆ)

ಅಬ್ಸ್ಟ್ರಾಕ್ಟ್: (ಸಾರಲೇಖ)

ಬಹುತ್ವ ಭಾರತದಲ್ಲಿ ಶೈಕ್ಷಣಿಕ ಅಸ್ಮಿತೆಯು ತುರ್ತು ಚರ್ಚೆಯಲ್ಲಿದೆ. ಸಾರ್ವಜನಿಕ ಮತ್ತು ಸಾರ್ವತ್ರಿಕ ಶಿಕ್ಷಣವು ಬಹುತೇಕ ಖಾಸಗಿ ವಲಯದೆಡೆಗೆ ಗಂಭೀರವಾಗಿ ವರ್ಗಾಹಿತವಾಗಿರುವ ಪರಿಣಾಮ, ನಾಗರಿಕ ತಿಳುವಳಿಕೆಯ ಸುಕ್ಷಿತ ಜನಸಮುದಾಯದ ಪ್ರಮಾಣ ಕೊರತೆಯಲ್ಲಿದೆ. ಈಗ ನಮ್ಮ ಮುಂದಿರುವ ಪ್ರಶ್ನೆ ಇದನ್ನು ಸರಿದೂಗಿಸುವುದು ಹೇಗೆ? ಆ ನಿಟ್ಟಿನಲ್ಲಿ ಶಿಕ್ಷಣಕ್ಕೆ ಇರುವಂತಹ ಶೈಕ್ಷಣಿಕ ಅವಕಾಶಗಳ ಸೂಕ್ಷ್ಮತೆಗಳು ಜನರಿಗೆ ಪರಿಣಾಮಕಾರಿಯಾಗಿ ಅರಿವಿಗೆ ಬರಬೇಕು ಮತ್ತು ಬಳಕೆಯಾಗಬೇಕು. ಇಲ್ಲಿ ಬರುವಂತಹ ಸವಾಲುಗಳೇನು? ಅದಕ್ಕೆ ಪೂರಕವಾದ ಪರಿಹಾರ ಕ್ರಮಗಳೇನು? ಇವುಗಳನ್ನು ತಿಳಿಯುವ ಪ್ರಯತ್ನ ಎಲ್ಲರಿಗೂ ತುರ್ತಿದೆ. ವ್ಯಕ್ತಿಯ ಗುರುತು ಶೈಕ್ಷಣಿಕ ಹಿನ್ನಲೆಯಿಂದಲೇ ರುಜುವಾತು ಮಾಡುವ ಈ ದಿನಮಾನಗಳಲ್ಲಿ ಶಿಕ್ಷಣ ನೀತಿಗಳು, ಶೈಕ್ಷಣಿಕ ಸೌಲಭ್ಯಗಳು, ಶೈಕ್ಷಣಿಕ ಕಾರ್ಯಕ್ರಮಗಳು, ಶಿಕ್ಷಣದ ಬಗೆಗಿನ ಸಂವಿಧಾನಿಕ ತಿದ್ದುಪಡಿಗಳು, ಶೈಕ್ಷಣಿಕ ಸುಧಾರಣೆಗಳು ಹೆಚ್ಚು ವಿಮರ್ಶೆಗೆ ಒಳಪಡಬೇಕಾಗಿದೆ. ಶಿಕ್ಷಣ ವಂಚಿತರನ್ನು ಕಲಿಕೆಯ ಮುಖ್ಯವಾಹಿನಿಗೆ ತರುವ ಸುಧಾರಣೆಕ್ಕಿಂತಲ್ಲೂ ದೈನಂದಿನ ವ್ಯವಹಾರಿಕ ಜೀವನದಲ್ಲಿ ಕಲಿತವರ ಜಾಗೃತ ಒಳಗೊಳ್ಳುವಿಕೆ ಅಥವಾ ಸಮಷ್ಟಿಯ ಸಮಾಜವು ನಿರ್ಮಾಣವಾಗುವುದರ ಕಡೆಗೆ ಆಡಳಿತವು ಗಮನಹರಿಸಬೇಕಾಗಿದೆ. ಗುರುಕುಲ ಪದ್ಧತಿಯಿಂದ ಇಂದಿನ ಡಿಜಿಟಲ್ ಕಲಿಕೆಯವರೆಗೆ ಸುಧಾರಿತ ಶೈಕ್ಷಣಿಕ ಕ್ರಮಗಳನ್ನು ಅರಿಯುದರ ಜೊತೆಗೆ ಈ ವಿಚಾರವಾಗಿ ಮುಂದಿನ ಸವಾಲುಗಳನ್ನು ಪೂರ್ವಭಾವಿಯಾಗಿ ತಿಳಿಯುವ ಹಾಗೂ ಈ ಸಂಬಂಧ ತರಬಹುದಾದ ವೈಚಾರಿಕ ಮತ್ತು ವೈಜ್ಞಾನಿಕ ಪರಿಹಾರ ಕ್ರಮಗಳನ್ನು ಕಂಡುಕೊಳ್ಳುವ ಅಗತ್ಯವಿದೆ. ಪ್ರಸ್ತುತದಲ್ಲಿ ಜ್ಞಾನ, ಕೌಶಲ್ಯ, ಮೌಲ್ಯಗಳು ಮತ್ತು ಸಾಮಾಜಿಕ ಅರಿವಿನ ಶೈಕ್ಷಣಿಕ ಅಸ್ಮಿತೆ ನಿರ್ಮಿತವಾಗಬೇಕು. ಈ ನಿಟ್ಟಿನಲ್ಲಿ ಯೋಚಿತ-ಯೋಜನೆಗಳು ಕಾನೂನಿನಡಿಯಲ್ಲಿ ಜಾರಿಯಾಗಬೇಕು. ಇದಕ್ಕೆ ಜನಸಾಮಾನ್ಯನ ಗುರುತರ ಹೊಣೆಗಾರಿಕೆಯು ಅಗತ್ಯವಿದೆ. ಭಾರತದಲ್ಲಿ ವ್ಯಕ್ತಿಯ ವ್ಯಕ್ತಿತ್ವದ ಸಮಗ್ರ ಅಭಿವೃದ್ಧಿಯು ಇಲ್ಲಿನ ಪರಸ್ಪರ ಸಂಬಂಧಿ ವಿಚಾರಗಳಾದ ಶೈಕ್ಷಣಿಕ ಅಸ್ಮಿತೆ ಮತ್ತು ಸಂವಿಧಾನಾತ್ಮಕ ಅವಕಾಶಗಳ ಮೇಲೆ ಅಲಂಬಿತವಾಗಿದೆ. ಪ್ರಜಾಸತ್ತಾತ್ಮಕ ನಾಗರಿಕ ವ್ಯವಸ್ಥೆಯನ್ನು ಭವಿಷ್ಯದ ದೃಷ್ಟಿಯಿಂದ ಸುಸಜ್ಜಿತವಾಗಿ ಸದೃಢಗೊಳಿಸಲು ಶೈಕ್ಷಣಿಕ ಅಸ್ಮಿತೆ ಮತ್ತು ಸಂವಿಧಾನಾತ್ಮಕ ಅವಕಾಶಗಳ ಈ ಬಗೆಗಿನ ಆರೋಗ್ಯಕರ ಚರ್ಚೆ ಇಲ್ಲಿ ಅನಿವಾರ್ಯವಿದೆ.

ಕೀ ವರ್ಡ್‌ಗಳು: ಅಸ್ಮಿತೆ, ರುಜುವಾತು,  ಗುರುಕುಲ, ಡಿಜಿಟಲ್, ಕೌಶಲ್ಯ.

ಹರೀಶ ಎಂ.ಆರ್. ಅತಿಥಿ ಉಪನ್ಯಾಸಕರು, ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ-577126. ಕೊಪ್ಪ (ತಾಲ್ಲೂಕು) ಚಿಕ್ಕಮಗಳೂರು (ಜಿಲ್ಲೆ) ಮೊಬೈಲ್ ಸಂಖ್ಯೆ:7975266192. ಇ-ಮೇಲ್ ಐಡಿ: harishpolsc@gmail.com

# EDUCATIONAL IDENTITY IN INDIA AND CONSTITUTIONAL OPPORTUNITIES

# ಭಾರತದಲ್ಲಿ ಶೈಕ್ಷಣಿಕ ಅಸ್ಮಿತೆ ಮತ್ತು ಸಂವಿಧಾನಾತ್ಮಕ ಅವಕಾಶಗಳು

**ಪೀಠಿಕೆ:–**

ಪ್ರಚಲಿತ ದಿನಮಾನಗಳಲ್ಲಿ 'ಶಿಕ್ಷಣವು' ಮಾನವನ ಮೂಲಭೂತ ಅಗತ್ಯತೆಗಳಲ್ಲಿ ಒಂದು. ಇದು ವ್ಯಕ್ತಿಯ "ಜ್ಞಾನ, ಕೌಶಲ್ಯ, ಮೌಲ್ಯ"ಗಳನ್ನು ಅಭಿವೃದ್ಧಿಗೊಳಿಸುವ ಪರಿಕಲ್ಪನೆ.'ವ್ಯಕ್ತಿತ್ವ ವಿಕಸನ ಮತ್ತು ಸಾಮಾಜಿಕ ಜಾಗೃತಿ' ಇದರ ಪ್ರಧಾನ ಆಶಯಗಳು. ಪ್ರಸ್ತುತ ದಿನಗಳಲ್ಲಿ ಆತ್ಮವಿಶ್ವಾಸ, ಹೊಣೆಗಾರಿಕೆ, ಉದ್ಯೋಗವಕಾಶ ಮತ್ತು ತಾರತಮ್ಯ ರಹಿತ ಬದುಕಿನ ಪ್ರಶ್ನೆ ಎದುರಾದಾಗ ಶಿಕ್ಷಣದ 'ಸಾರ್ವತ್ರಿಕತೆಯ ಗುಣಮಟ್ಟ' ಮೌಲ್ಯಮಾನದ ಚರ್ಚೆಗೆ ಬರುತ್ತದೆ. 'ರಾಷ್ಟ್ರೀಯ ಅಸ್ಮಿತೆಯ' ಮುಖ್ಯ ಸಾಧನಗಳಲ್ಲಿ ಒಂದಾದ ಶಿಕ್ಷಣವು ಭಾರತದಂತಹ ಅಭಿವೃದ್ಧಿ ಪಥದಲ್ಲಿರುವ ರಾಷ್ಟ್ರಕ್ಕೆ ಇದೊಂದು ಸಾರ್ವಜನಿಕ ಅವಕಾಶ.ಯಾವುದೇ ರಾಷ್ಟ್ರದಲ್ಲಿ ಶೈಕ್ಷಣಿಕ ಅಸ್ಮಿತೆಯು "ಕಲಿಯುವವನ ಶ್ರದ್ಧೆ ಮತ್ತು ಜ್ಞಾನ ಹಂಚುವವನ ಸದೃಢತೆಯ" ಮೇಲೆ ನಿಂತಿರುತ್ತದೆ. ಸ್ವತಂತ್ರ ನಂತರದ ಭಾರತದ ಸಂವಿಧಾನಿಕ ಚೌಕಟ್ಟಿನ ಒಳಗೆ ಇದಕ್ಕೆ ವಿಶೇಷ ಸ್ಥಾನ–ಮಾನ ಕಲ್ಪಿಸಲಾಗಿದೆ. ಪ್ರಜಾಸತ್ತಾತ್ಮಕ ನಾಗರಿಕನನ್ನುರೂಪಿಸುವಲ್ಲಿ ಶಿಕ್ಷಣದಸೌಲಭ್ಯಗಳು ಮತ್ತು ಸವಾಲುಗಳು ಭಾರತದ ಸಂವಿಧಾನದಡಿಯಲ್ಲಿ ಹೇಗೆ ಗುರುತಿಸಿಕೊಂಡಿದೆ ಎಂಬುದರ ಬಗ್ಗೆ ಇಲ್ಲಿ ಚರ್ಚೆಗಳಿವೆ.

**ವಿಷಯದ ಪೂರ್ವ–ಪರ ಉದ್ದೇಶಗಳ ಚರ್ಚೆ:–**

ಬದಲಾದ ರಾಜಕೀಯ ಸನ್ನಿವೇಶದಲ್ಲಿ ಪ್ರಾಥಮಿಕ ಶಿಕ್ಷಣದಿಂದ ಮುಂದುವರೆದು ಉನ್ನತ ಶಿಕ್ಷಣದವರೆಗಿನ ಪಠ್ಯ ರಚನೆಯಲ್ಲಿ ವಿಭಿನ್ನ ನಿಲುವುಗಳಿವೆ. ಇಂತಹದೆ ಪಠ್ಯ ಇರಬೇಕು ಅಥವಾ ಇರಬಾರದು ಎಂಬ ವಿಚಾರದ ಮೇಲೆ ರಾಜಕೀಯ ಸಂಘರ್ಷಗಳಿವೆ. ಶಿಕ್ಷಣ ನೀತಿಗಳ ರಚನೆ ಮತ್ತು ಜಾರಿಯಲ್ಲಿ ಪುನಃ ಬೇಕು ಅಥವಾ ಬೇಡ ಎನ್ನುವುದರಡಿ ಪರ–ವಿರೋಧ ನಿಲುವುಗಳಿವೆ. ಅಂದುಕೊಂಡಷ್ಟು ಸುಲಭವಾಗಿ ಶಿಕ್ಷಣದ ಮೇಲಿನ ಕಾಯಿದೆಗಳು, ಸುಧಾರಣೆಗಳು, ತಿದ್ದುಪಡಿಗಳು ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತಿಲ್ಲ. ಪರಿಣಾಮ ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು, ಶೈಕ್ಷಣಿಕ ಸಂಸ್ಥೆಗಳು ಶಿಕ್ಷಣದ ಮೂಲ ಉದ್ದೇಶವನ್ನು ಈಡೇರಿಸಿಕೊಳ್ಳುವಲ್ಲಿ ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ಈ ನಡುವೆ ಪ್ರಸ್ತುತ ವ್ಯವಸ್ಥೆಗೆ "ತಿಳುವಳಿಕೆಯ ಜಾಗೃತ ಶಿಕ್ಷಣ" ಅಗತ್ಯವಿದೆ. ಅದರಿಂದ ಮಾತ್ರ ಸಮಾಜದ ಸ್ಥಿತ ಕೊಳಕುಗಳನ್ನು ನಾಶ ಮಾಡಬಲ್ಲದು, ಇದು ಅಂಕ ಮತ್ತು ಉದ್ಯೋಗಾಧಾರಿತ ಕಲಿಕೆಯಿಂದ ಸಾಧ್ಯವಿಲ್ಲ. ಹಾಗಾಗಿ ಭಾರತದಲ್ಲಿನ ಶೈಕ್ಷಣಿಕ ಸ್ಥಿತಿಗತಿಗಳು, ಸಂವಿಧಾನದಲ್ಲಿ ಶಿಕ್ಷಣದ ಮಹತ್ವ, ಸಮಾನ ಅವಕಾಶದಲ್ಲಿ ಶಿಕ್ಷಣ, ವ್ಯಕ್ತಿ ಹಾಗೂ ಸಮಾಜದ ಅಭಿವೃದ್ಧಿಯಲ್ಲಿ ಶಿಕ್ಷಣ ಮತ್ತು ಆ ಸಂಬಂಧದ ಯೋಜನೆಗಳು, ಶಿಕ್ಷಣ ಕ್ಷೇತ್ರದಲ್ಲಿನ ಸವಾಲುಗಳು ಮತ್ತು ಅಸಮಾನತೆಗಳನ್ನು ಗುರುತಿಸುವುದು ಹಾಗೂ ಈ ವಿಚಾರವಾಗಿ ಪರಿಹಾರಗಳನ್ನು, ಸಲಹೆಗಳನ್ನು ನೀಡುವುದು, ಶಿಕ್ಷಣದ ಹಕ್ಕಿನ ಮಹತ್ವವನ್ನು ವಿವರಿಸುವುದು, ಜೊತೆಗೆ ಈ ಬಗೆಗಿನ ಸೌಲಭ್ಯಗಳನ್ನು ಅರಿಯುವುದು. ಇತ್ಯಾದಿಗಳೆಲ್ಲಾವು ಇಲ್ಲಿ ಚರ್ಚಿತವಾಗುತ್ತವೆ.

**ಭಾರತದಲ್ಲಿ ಶೈಕ್ಷಣಿಕ ಅಸ್ಮಿತೆಯ ಹಿನ್ನೆಲೆ:–**

ಪ್ರಾಚೀನ ಭಾರತದ ಶಿಕ್ಷಣ ವ್ಯವಸ್ಥೆಯು "ಗುರುಕುಲ" ಪದ್ಧತಿಯೊಂದಿಗೆ ಆರಂಭ. ಇದು ಹೆಚ್ಚು ಧಾರ್ಮಿಕ ಹಾಗೂ ನೈತಿಕ ಮೌಲ್ಯದ ಶಿಕ್ಷಣಕ್ಕೆ ಒತ್ತು ನೀಡಿತು. ವೇದಗಳ ಕಾಲದ ಈ ಅವಧಿಯ ಶಿಕ್ಷಣದ ಪಠ್ಯವು ಧರ್ಮಶಾಸ್ತ್ರಗಳು, ಉಪನಿಷತ್ತುಗಳು ಮತ್ತು ವೇದಗಳ ಮೇಲೆ ಹೆಚ್ಚು ಅವಲಂಬಿತವಾಗಿತ್ತು. ಭಾರತದ ಪುರಾತನ ವಿಶ್ವ ವಿದ್ಯಾಲಯಗಳಾದ 'ನಳಂದ ಮತ್ತು ತಕ್ಷಶಿಲ' ವಿಶ್ವ ವಿದ್ಯಾಲಯಗಳು ಈ ಸಮಯದಲ್ಲಿ ಹೆಚ್ಚು ಪ್ರಸಿದ್ಧಿ ಪಡೆದಿದ್ದವು. ಒಟ್ಟಾರೆ ಈ ಕಾಲಾವಧಿಯ ಜ್ಞಾನ ಶಾಖೆಗಳು ಐತಿಹಾಸಿಕತೆ, ಧರ್ಮ, ಭಾಷೆ, ಸಂಸ್ಕೃತಿ, ಇತ್ಯಾದಿ ವೈವಿಧ್ಯಮಯ ಕಲಿಕೆಗೆ ಬಿಂಬಿತವಾಗಿತ್ತು.

ಮಧ್ಯಕಾಲೀನ ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಮುಸ್ಲಿಂ ಆಡಳಿತದ ಪರಿಣಾಮವಾಗಿ 'ಅರೇಬಿಕ್ ಮತ್ತು ಪಾರ್ಸಿ' ಭಾಷೆಗಳುಇಲ್ಲಿ ನೆಲೆ ಕಂಡವು. ಅದಕ್ಕೆ ಪೂರಕವಾಗಿ ಕಲಿಕಾ ಕೇಂದ್ರಗಳಾದ 'ಮದರಸಗಳು' ಸಾಕಷ್ಟು ಪ್ರಮಾಣದಲ್ಲಿ ಹುಟ್ಟಿಕೊಂಡವು. ಇಸ್ಲಾಮಿಕ ಧಾರ್ಮಿಕ ಶಿಕ್ಷಣ ಮುನ್ನಾಲಿಗೆಗೆ ಬಂದಿತ್ತು. ಈ ನಡುವೆ ಹಿಂದೂ ಪದ್ಧತಿಯ ಶಿಕ್ಷಣದ ಅಸ್ಮಿತೆಗೆ ಭಂಗ ಉಂಟಾದರೂ ಪರಸ್ಪರ ಪ್ರಭಾವಿತ ಕಲಿಕಾ ಸುಸ್ಥಿತಿ ಎದುರುಗೊಂಡವು.

ಬಹುತೇಕ ಆಧುನಿಕ ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು ಭಾರತದಲ್ಲಿ ಬ್ರಿಟಿಷರ ಆಡಳಿತ ಕಾಲದ ಶಿಕ್ಷಣ ಪದ್ಧತಿಯೊಂದಿಗೆ ಗುರುತಿಸಲಾಗುತ್ತದೆ. ಈ ಅವಧಿಯಲ್ಲಿ ಭಾರತೀಯ ಶಿಕ್ಷಣದಲ್ಲಿ ಮಹತ್ತರವಾದ ಬದಲಾವಣೆಗಳು ಸಂಭವಿಸಿದವು. ಕ್ರೈಸ್ತ ಧರ್ಮದ ಪ್ರಚಾರದ ಹಿನ್ನೆಲೆಯಲ್ಲಿ ಭಾರತಕ್ಕೆ ಬಂದಂತಹ ಐರೋಪ್ಯ ದೇಶಗಳ 'ಕ್ರಿಶ್ಚನ್ ಮಿಷನರಿ'ಗಳುಇಲ್ಲಿನ ಶಿಕ್ಷಣದ ಆಮೂಲಾಗ್ರಹ ಬದಲಾವಣೆಯನ್ನು ತರುವಲ್ಲಿ ಮುಂದಾಗುತ್ತವೆ ಮತ್ತು ಅಷ್ಟರಮಟ್ಟಿಗೆ ಯಶಸ್ಸು ಸಹ ಸಾಧಿಸುತ್ತವೆ. ಬ್ರಿಟಿಷರಭಾರತದ ವಸಾಹತುಶಾಹಿ ಮತ್ತು ವಸಾಹತ್ತೋತ್ತರ ಆಳ್ವಿಕೆಯಲ್ಲಿ ಪಾಶ್ಚಾಮಾತ್ಯ ಶಿಕ್ಷಣ ಪದ್ಧತಿಯು"ಆಂಗ್ಲ ಮಾಧ್ಯಮ"ದಲ್ಲಿನೆಲೆಯೂರಿತ್ತು. ಇದನ್ನು "ಲಾರ್ಡ್ ಮೆಕಾಲೆ" ಶಿಕ್ಷಣ ಪದ್ಧತಿ ಎಂದು ಕರೆಯುವುದುಂಟು. 1835ರ ಲಾರ್ಡ್ ಮೆಕಾಲೆಯವರ "ಮಿನಿಟ್ ಆನ್ ಎಜುಕೇಷನ್" ಭಾರತದ ಶಿಕ್ಷಣದ ದಾರಿಯಲ್ಲಿ ಹೊಸ ಮೈಲುಗಲ್ಲು. ಇದು 1990ರ ನಂತರದ ಇಂದಿನವರೆಗಿನ ಮುಂದುವರೆದ ತಂತ್ರಜ್ಞಾನ ಆಧಾರಿತ ಶಿಕ್ಷಣಕ್ಕೆ ಅಡಿಗಲ್ಲು. ಒಟ್ಟಾರೆ ಆಧುನಿಕ ಮತ್ತು ಬ್ರಿಟಿಷ್ ಶಿಕ್ಷಣ ಪದ್ಧತಿಯು ಭಾರತೀಯರಿಗೆ "ವಿಜ್ಞಾನ, ತತ್ವಶಾಸ್ತ್ರ ಮತ್ತು ತರ್ಕಶಾಸ್ತ್ರ ಹಾಗೂ ಇನ್ನಿತರ ಆಧುನಿಕ ವಿದ್ಯೆಗಳನ್ನು" ಪರಿಚಯ ಮಾಡಿಸಿತು.ಇದರಿಂದ ಭಾರತೀಯರಲ್ಲಿ ಹೊಸ ಚಿಂತನೆಗಳು, ಸಂಶೋಧನೆಗಳು, ಮತ್ತುರಾಷ್ಟ್ರೀಯ ಭಾವನೆಯನ್ನುಬೆಳೆಸಿತು. ಜೊತೆಗೆ ಅದು ನಮ್ಮ ರಾಷ್ಟ್ರೀಯ ಸ್ವಾತಂತ್ರ ಹೋರಾಟಕ್ಕೆ ಹಾಗೂ ಮುಂದೆ ನಮ್ಮನ್ನು ನಾವು ಆಳ್ವಿಕೆ ಮಾಡಿಕೊಳ್ಳುವುದಕ್ಕೆಸಹಾಯಕವಾಯಿತು.

ಸಂವಿಧಾನ ಪೂರ್ವ ಭಾರತೀಯ ಶಿಕ್ಷಣದ ಕೆಲವು ಹೆಗ್ಗುರುತುಗಳುಭಾರತದ ಶೈಕ್ಷಣಿಕ ಅಸ್ಮಿತೆಯನ್ನುಎತ್ತಿ ಹಿಡಿದಿದೆ. ಅವುಗಳಲ್ಲಿ ಭಾರತೀಯ ಶಿಕ್ಷಣದ "ಮ್ಯಾಗ್ನಾಕಾರ್ಟಾ" ಎಂದು ಕರೆಯಲ್ಪಡುವ 1854ರ "ಚಾರ್ಲ್ಸ್‌ವುಡ್ ಡಿಸ್ಪ್ಯಾಚ್ ಆಕ್ಟ್" ಇದು ಮಹಿಳಾ ಶಿಕ್ಷಣ ಸೇರಿದಂತೆ ಪ್ರಾಥಮಿಕದಿಂದ ಉನ್ನತ ಶಿಕ್ಷಣದವರೆಗೆ ವ್ಯವಸ್ಥೆ ಕಲ್ಪಿಸಿತು. ಪದವಿ ಶಿಕ್ಷಣಕ್ಕಾಗಿ 1857ರಲ್ಲಿ "ಕಲ್ಕತ್ತ ಮುಂಬೈ ಹಾಗೂ ಮದ್ರಾಸ್" ವಿಶ್ವ ವಿದ್ಯಾಲಯಗಳ ಸ್ಥಾಪನೆ. ಗ್ರಾಮೀಣ ಶಿಕ್ಷಣ ಸೇರಿದಂತೆ ಪ್ರಾಥಮಿಕ ಶಿಕ್ಷಣದ ವಿಸ್ತರಣೆಗೆ ಮಾಡಲ್ಪಟ್ಟಂತಹ "1882ರ ಹಂಟರ್ ಆಯೋಗ" ಹಾಗೂ ಸರ್ಕಾರದ ನಿಯಂತ್ರಣದ ಮೇಲೆ ಜಾರಿಗೆ ಬಂದತಂಹ "1904 ಇಂಡಿಯನ್ ಯೂನಿವರ್ಸಿಟೀಸ್ ಆ್ಯಕ್ಟ್" ಬ್ರಿಟಿಷರು ಇಲ್ಲಿನ ಶೈಕ್ಷಣಿಕ ವ್ಯವಸ್ಥೆಯ ನಿಯಂತ್ರಣಕ್ಕೆ ಜಾರಿ ಮಾಡಿದ 1904ರ "ಇಂಡಿಯನ್ ಎಜುಕೇಷನ್ ಆ್ಯಕ್ಟ್" ಉನ್ನತ ಶಿಕ್ಷಣದ ಸುಧಾರಣೆಗೆ ಶಿಫಾರಸ್ಸು ಮಾಡಿದ 1913ರ "ಸ್ಯಾಡ್ಲರ್ ಆಯೋಗ,"ಪ್ರಾಥಮಿಕ ಮತ್ತು ಹಿರಿಯ ಶಾಲಾ ಶಿಕ್ಷಣದ ವ್ಯಾಪ್ತಿಯನ್ನು ವಿಸ್ತರಿಸಿದ 1944ರ "ಸಾರ್ಜಂಟ್ ಪ್ಲಾನ್" ಇತ್ಯಾದಿಗಳು.

ಸ್ವತಂತ್ರ ನಂತರ ಭಾರತದ ಶೈಕ್ಷಣಿಕ ಸುಧಾರಣೆಗೆ ವಿವಿಧ ಶಿಫಾರಸ್ಸುಗಳನ್ನು ನೀಡಿದ ಪ್ರಮುಖ ಸಮಿತಿಗಳುರಾಧಾಕೃಷ್ಣನ್‌ಸಮಿತಿ,(1948–49)ಮುಡಲಿಯಾರ್‌ಸಮಿತಿ,(1952–53)ಕೊಟಾರಿ ಸಮಿತಿ(1964–66) ರಾಷ್ಟ್ರೀಯ ಶಿಕ್ಷಣ ನೀತಿಗಳು (1968, 1986, 2020) ಇವುಗಳೆಲ್ಲವೂ"ಸಮಗ್ರ, ಸಮಾನತೆ ಮತ್ತು ಆಧುನಿಕ ಶಿಕ್ಷಣಕ್ಕೆ" ಹೆಚ್ಚು ಆದ್ಯತೆ ನೀಡಿದವು. ಪ್ರಸ್ತುತ ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ಪದವಿಪೂರ್ವ ಶಿಕ್ಷಣ, ಉನ್ನತ ಮತ್ತು ತಾಂತ್ರಿಕ ಶಿಕ್ಷಣ, ಹಾಗೂ ಸಂಶೋಧನಾ ಹಂತದ ಶಿಕ್ಷಣ ವ್ಯವಸ್ಥೆಯನ್ನು ಮೇಲ್ನೋಟಕ್ಕೆ ಗುರುತಿಸಲಾಗಿದೆ. ಶೈಕ್ಷಣಿಕ ಸೌಲಭ್ಯಗಳ ವಿಚಾರಕ್ಕೆ ಬಂದಾಗ ಶಾಲಾ–ಕಾಲೇಜುಗಳು, ವಿಶ್ವವಿದ್ಯಾಲಯಗಳು, ತಾಂತ್ರಿಕ ಶಿಕ್ಷಣದ ಇನ್‌ಸ್ಟಿಟ್ಯೂಟ್‌ಗಳು, ಶೈಕ್ಷಣಿಕ ತರಬೇತಿ ಕೇಂದ್ರಗಳು ಲಭ್ಯಗಳಿವೆ. ಉಚಿತ ಊಟದ ಯೋಜನೆ, ಪಠ್ಯಪುಸ್ತಕಗಳು, ಯೂನಿಫಾರಂ, ವಿದ್ಯಾರ್ಥಿವೇತನಗಳು, ಬಸ್‌ಪಾಸ್, ಕೇಂದ್ರೀಯ ವಿದ್ಯಾಲಯಗಳು, ನವೋದಯ ವಿದ್ಯಾಲಯಗಳು, ಸರ್ವಶಿಕ್ಷಣಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ, ಹಾಸ್ಟೆಲ್ ಸೌಲಭ್ಯಗಳು, ಡಿಜಿಟಲ್ ಕಲಿಕೆ, ಸ್ಮಾರ್ಟ್‌ಕ್ಲಾಸ್ ರೂಮ್‌ಗಳು ಉನ್ನತೀಕರಣದ ಗ್ರಂಥಾಲಯಗಳು, ಜೊತೆಗೆ ಹಲವಾರು ಪಠ್ಯಪೂರಕ ಚಟುವಟಿಕೆಗಳು ಭಾರತೀಯ ಶೈಕ್ಷಣಿಕ ಕಾರ್ಯಸಾಧ್ಯತೆಯಲ್ಲಿರುವುದು ಕಂಡುಬರುತ್ತವೆ.

ಭಾರತದಲ್ಲಿ ಸಂವಿಧಾನಾತ್ಮಕ ಶೈಕ್ಷಣಿಕ ಅವಕಾಶಗಳು:–

ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ 'ಶಿಕ್ಷಣ'ವನ್ನು 1976ರಲ್ಲಿ ಸಂವಿಧಾನಕ್ಕೆ ತರಲಾದ 42ನೇ ತಿದ್ದುಪಡಿಯ ನಂತರ "ಸಮವರ್ತಿ ಪಟ್ಟಿ" ಗೆ ಸೇರಿಸಲಾಗಿದೆ.ಹಾಗಾಗಿ ಶಿಕ್ಷಣದ ಮೇಲೆ ಕೇಂದ್ರ ಮತು ರಾಜ್ಯ ಸರ್ಕಾರಗಳು ಸೇರಿರೂಪರೇಷಗಳನ್ನು ರಚಿಸುತ್ತವೆ.

6ರಿಂದ 14 ವರ್ಷದ ಮಕ್ಕಳಿಗೆ ಇಂದು ಶಿಕ್ಷಣವು ಸಂವಿಧಾನಾತ್ಮಕವಾಗಿ"ಮೂಲಭೂತ ಹಕ್ಕು"ಈ ಸಂಬಂಧ ತರಲಾದ '2002ರ 86ನೇ' ಸಂವಿಧಾನಿಕ ತಿದ್ದುಪಡಿಯಲ್ಲಿ '21/ಎ' ವಿಧಿಯನ್ನು(ಎಲೆಮೆಂಟರಿ ಎಜುಕೇಷನ್) ಸಂವಿಧಾನಕ್ಕೆಸೇರ್ಪಡೆ ಮಾಡಿ ಇದರಡಿಯಲ್ಲಿ "ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು–2009"(ಆರ್‌ಟಿಇ) ರಾಷ್ಟ್ರವ್ಯಾಪಿ ಜಾರಿ ಮಾಡಲಾಗಿದೆ. (2010ರಿಂದ ಇದು ಸಂಪೂರ್ಣವಾಗಿ ಅನುಷ್ಠಾನಗೊಂಡಿದೆ–ಕರ್ನಾಟಕದಲ್ಲಿ 28 ಏಪ್ರಿಲ್ 2012ರಂದು ಜಾರಿಗೆ ಬಂದಿದೆ) ಈ ತಿದ್ದುಪಡಿಗೂ ಮೊದಲು ಸಂವಿಧಾನದ ರಾಜ್ಯ ನೀತಿ ನಿರ್ದೇಶಕ ತತ್ವಗಳಲ್ಲಿನ 45ನೇ ವಿಧಿಯು 14 ವರ್ಷದೊಳಗೆನ ಎಲ್ಲ ಮಕ್ಕಳಿಗೆ "ಉಚಿತ ಮತ್ತು ಕಡ್ಡಾಯ ಶಿಕ್ಷಣ"ವನ್ನು ನೀಡಲು ಕ್ರಮ ತೆಗೆದುಕೊಳ್ಳತಕ್ಕದು ಎಂದು ಹೇಳುತ್ತಿತ್ತು. 86ನೇ ತಿದ್ದುಪಡಿಯ ತರುವಾಯ ಅದು "ಆರು ವರ್ಷ ವಯಸ್ಸು ಪೂರೈಸುವವರೆಗೆ ಎಲ್ಲ ಮಕ್ಕಳಿಗೆ ಶೈಶವಾವಸ್ಥೆಯ ರಕ್ಷಣೆ ಮತ್ತು ಶಿಕ್ಷಣ ನೀಡುವುದು"ಎಂದು ಜಾರಿ ಮಾಡಲಾಯಿತು.

ಮೂಲಭೂತ ಹಕ್ಕುಗಳಲ್ಲಿ"14ನೇ ವಿಧಿಯು ಎಲ್ಲರಿಗೂ ಸಮಾನ ಅವಕಾಶ"ದಡಿ ಶಿಕ್ಷಣ ಕ್ಷೇತ್ರದಲ್ಲಿಯೂ ಬೇದಭಾವವಿಲ್ಲದೆ ಸಮಾನ ಅವಕಾಶ ನೀಡುವುದನ್ನು ಖಚಿತ ಪಡಿಸುತ್ತದೆ.

15ನೇ ವಿಧಿಯು "ಯಾವುದೇ ತಾರತಮ್ಯವಿಲ್ಲದೆ ಶಿಕ್ಷಣವನ್ನು ಸಾರ್ವತ್ರಿಕ ಸೌಲಭ್ಯವಾಗಿ" ಎಲ್ಲರಿಗೂ ಒದಗಿಸುವುದು, ಜೊತೆಗೆ ರಾಜ್ಯವು "ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಗೆ ಅಥವಾ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ" ಅಭ್ಯುದಯಕ್ಕಾಗಿ ವಿಶೇಷ ನಿಯಮಗಳನ್ನು ರಚಿಸಬಹುದು.(ಮೀಸಲಾತಿ)ಮುಂದುವರೆದು, 16ನೇ ವಿಧಿಯು ಸಮಾನವಕಾಶದಲ್ಲಿ ಭಾರತೀಯರಿಗೆ ಶಿಕ್ಷಣವನ್ನು ಕಲ್ಪಿಸುವುದನ್ನು ತಿಳಿಸುತ್ತದೆ.

28ನೇ ವಿಧಿಯು ರಾಜ್ಯದ ಆಡಳಿತಕ್ಕೆ ಒಳಪಟ್ಟ ಶೈಕ್ಷಣಿಕ ಸಂಸ್ಥೆಗಳಲ್ಲಿ"ಅಲ್ಪಸಂಖ್ಯಾತರ ಹಿತಾಸಕ್ತಿಯ ಸಂರಕ್ಷಣೆ"ಯನ್ನು ಒಳಗೊಂಡಂತೆ ಧಾರ್ಮಿಕ ಶಿಕ್ಷಣವನ್ನು ನೀಡಬಹುದು.

29ನೇವಿಧಿಯ ಕೆಳಗೆ ಭಾರತೀಯರು "ತಮ್ಮ ಭಾಷೆ ಮತ್ತು ಲಿಪಿಗಳನ್ನು" ಅಭಿವೃದ್ಧಿಪಡಿಸಿಕೊಳ್ಳುವ ಮತ್ತು ಸಂರಕ್ಷಿಸಿಕೊಳ್ಳುವ ಹಕ್ಕು ಹೊಂದಿದ್ದಾರೆ. ಈ ವಿಚಾರವಾಗಿ ಯಾವ ಪೌರನಿಗೂ "ಶೈಕ್ಷಣಿಕ ಪ್ರವೇಶ ಅವಕಾಶವನ್ನು" ನಿರಾಕರಿಸುವಂತಿಲ್ಲ.

30ನೇ ವಿಧಿಯು ಎಲ್ಲಾ ಅಲ್ಪಸಂಖ್ಯಾತರು ತಮ್ಮದೇ ಆದ "ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ" ಮತ್ತು ಅವುಗಳ ಆಡಳಿತ ನಿರ್ವಹಿಸುವ ಹಕ್ಕು ಹೊಂದಿದ್ದಾರೆ. ಹಾಗೂ 'ಶೈಕ್ಷಣಿಕ ಅನುದಾನ'ವನ್ನು ಸರ್ಕಾರ ನೀಡುವಾಗ ಅಲ್ಪಸಂಖ್ಯಾತರು ಎಂಬ ಕಾರಣವನ್ನು ಆಧಾರವಾಗಿಟ್ಟುಕೊಂಡು ಇಲ್ಲಿ ತಾರತಮ್ಯ ಮಾಡುವಂತಿಲ್ಲ.

41ನೇ ವಿಧಿಯು 'ಶಿಕ್ಷಣಕ್ಕೆ ಸಹಾಯವನ್ನು' ಸರ್ಕಾರ ಒದಗಿಸುವುದರ ಬಗ್ಗೆ ತಿಳಿಸುತ್ತದೆ.46ನೇ ವಿಧಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಹಿತಾಸಕ್ತಿಗಳನ್ನು ಉತ್ತೇಜಿಸುವುದು.

350/ಎ ನೇ ವಿಧಿಯನ್ವಯ ಪ್ರಾಥಮಿಕ ಶಿಕ್ಷಣವನ್ನು ಮಕ್ಕಳ 'ಮಾತೃಭಾಷೆ'ಯಲ್ಲಿ ನೀಡಲು ಕ್ರಮಕೈಗೊಳ್ಳಬೇಕು.

ಮೂಲಭೂತ ಕರ್ತವ್ಯಗಳ ವಿಷಯಕ್ಕೆ ಬಂದಾಗ 2002 ರಲ್ಲಿ ಸಂವಿಧಾನಕ್ಕೆ ತಂದಂತಹ 86ನೇ ತಿದ್ದುಪಡಿಯಲ್ಲಿ ಸಂವಿಧಾನದ 4/ಎ ಭಾಗಕ್ಕೆ 51/ಕೆ ವಿಧಿಯನ್ನು ಸೇರಿಸಿ ಅದರನ್ವಯ ಎಲ್ಲ ತಂದೆ ತಾಯಿ ಅಥವಾ ಪಾಲಕರು 6ರಿಂದ14 ವರ್ಷ ವಯಸ್ಸಿನ ಮಕ್ಕಳಿಗೆ ಶಿಕ್ಷಣ ಪಡೆಯುವ ಅವಕಾಶವನ್ನು ಕಲ್ಪಿಸುವ ಕರ್ತವ್ಯ ಮಾಡತಕ್ಕದು.

ಭಾರತದಲ್ಲಿ ಶೈಕ್ಷಣಿಕ ಅಸ್ಮಿತೆಯ ಮೇಲಿನ ಸವಾಲುಗಳು:–

ಪ್ರಾಚೀನ ಕಾಲದಿಂದಲ್ಲೂ ಭಾರತದ ಶೈಕ್ಷಣಿಕ ವ್ಯವಸ್ಥೆಯ ಅಸ್ಮಿತೆಯು ಸವಾಲುಗಳ ಹೊರತಾಗಿಲ್ಲ. ಅದು ಬ್ರಿಟಿಷ್ ಆಡಳಿತದ ಕಾಲಘಟ್ಟವೂ ಸೇರಿದಂತೆ ಸ್ವಾತಂತ್ರ ಭಾರತದ ಸಂವಿಧಾನಿಕ ಶೈಕ್ಷಣಿಕ ಅವಕಾಶಗಳಲ್ಲೂ ಕಾಣಬಹುದು. ಇದು ಶೈಕ್ಷಣಿಕ ಕಾರ್ಯಕ್ಷಮತೆ ಮತ್ತು ಗುಣಮಟ್ಟದ ಮೇಲೆ ಭಾರಿ ಪ್ರಮಾಣದ ಪರಿಣಾಮಗಳನ್ನು ಉಂಟು ಮಾಡಿದೆ ಅದಕ್ಕೆ ಕಾರಣಗಳು ಮತ್ತು ಪರಿಹಾರಗಳು ಏನೇ ಇರಬಹುದು ಆದರೆ ಈ ಹೊತ್ತಿಗೆ ಸವಾಲುಗಳ ಪರಿವಿಮರ್ಶೆ ಅಗತ್ಯ ಅವುಗಳಲ್ಲಿ ಮುಖ್ಯವಾದವುಗಳು ಹೀಗಿವೆ.

ಪ್ರಾದೇಶಿಕ ಅಸಮತೋಲನ:– ಇದನ್ನು ನಗರ ಮತ್ತು ಗ್ರಾಮೀಣ ಪ್ರದೇಶಗಳ ಅಂತರತೆಯಲ್ಲಿ ಗುರುತಿಸಲಾಗುತ್ತದೆ. ಶೈಕ್ಷಣಿಕ ವ್ಯವಸ್ಥೆಗೆ ಇದು ಸ್ವಾಭಾವಿಕ ಸವಾಲು, ಇದಕ್ಕೆ ಪರಿಹಾರ ಕ್ರಮಗಳು ಕೊನೆಯಿಲ್ಲದ್ದು. ನಗರ ಪ್ರದೇಶದಲ್ಲಿ ಉತ್ತಮ ಶೈಕ್ಷಣಿಕ ಸೌಲಭ್ಯಗಳು ಲಭ್ಯವಾಗುತ್ತವೆ.ಅವು ಆಧುನಿಕತೆಯ ಕೌಶಲ್ಯಗಳನ್ನು ಒಳಗೊಂಡಿರುತ್ತವೆ. ಶೈಕ್ಷಣಿಕವಾಗಿ ತಜ್ಞ ಸಂಪನ್ಮೂಲಗಳು ಅಧಿಕವಾಗಿರುತ್ತದೆ. ಈ ಎಲ್ಲಾ ಕೊರತೆಗಳು ಗ್ರಾಮೀಣ ಭಾಗದಲ್ಲಿ ದುರ್ಬಲವಾಗಿವೆ.

ಆರ್ಥಿಕ ಅಸಮಾನತೆ:–ಆರ್ಥಿಕ ಸಬಲತೆಯ ಪೋಷಕರು ಅತ್ಯಾಧುನಿಕ ಸೌಲಭ್ಯಗಳ ಖಾಸಗಿ ಶಾಲೆಗಳೆಡೆಗೆ ತಮ್ಮ ಮಕ್ಕಳನ್ನು ಪ್ರತಿಷ್ಠೆಯ ಪ್ರಶ್ನೆಯಡಿ ಸೇರಿಸುತ್ತಾರೆ. ಬಡವರಿಗೆ ಇದು ಗಗನ ಕುಸುಮ, ಈ ನಿಟ್ಟಿನಲ್ಲಿ ಇವರುಗಳ ಮಕ್ಕಳಿಗೆ ಕನಿಷ್ಠ ಮೂಲ ಸೌಕರ್ಯಗಳಿಲ್ಲದ ಶಾಲೆಗಳೇ ಗತಿ. ಇದರಿಂದಾಗಿ ಭವಿಷ್ಯದಲ್ಲಿ ಬೌದ್ಧಿಕತೆಯ ಕೀಳರಿಮೆ ಉಂಟುಮಾಡುತ್ತದೆ. ಮುಂದುವರೆದು ಈ ಮಕ್ಕಳು ಸ್ಪರ್ಧಾತ್ಮಕ ಜಗತ್ತನ್ನು ಎದುರಿಸುವಲ್ಲಿ ಹಿಂದುಳಿಯುತ್ತಾರೆ.

ಭೌಗೋಳಿಕ ಸವಾಲುಗಳು:– ದೂರದ ವಿಚಾರದಲ್ಲಿ ಅನುಕೂಲತೆಯ ಶಾಲೆಗಳ ಅಲಭ್ಯತೆ ಮತ್ತು ಅಲ್ಲಿ ಡಿಜಿಟಲ್ ಶಿಕ್ಷಣದ ಪರಿಕರಗಳ ಬಳಕೆ ಅಸಾಧ್ಯವಾದರಿಂದ ಅಂತಹ ಪ್ರದೇಶಾಧಾರಿತ ಕಲಿಕಾರ್ಥಿಗಳಿಗೆ ಪರಿಣಾಮಕಾರಿ ಶಿಕ್ಷಣ ಕಲ್ಪಿಸಲು ಸಾಧ್ಯವಾಗುವುದಿಲ್ಲ. ಶಾಲಾ ಸೌಲಭ್ಯದ ದೂರವನ್ನು ಗಂಭೀರ ಸಮಸ್ಯೆಯನ್ನಾಗಿ ಪರಿಗಣಿಸಿದ ಮಕ್ಕಳ ಸುರಕ್ಷತೆಯ ಕೆಳಗೆ ಪೋಷಕರು ತಮ್ಮ ಮಕ್ಕಳನ್ನು ಶಾಲಾ ಕಲಿಕೆಯಿಂದ ಹೊರ ಉಳಿಸುವ ಸಾಧ್ಯತೆಗಳು ಇವೆ.

ಭಾಷಾ ಅಸಮತೋಲನ:– ಮೂಲ ಶಿಕ್ಷಣದ ಮೇಲೆ ಆಂಗ್ಲ ಭಾಷಾ ಮಾಧ್ಯಮದ ವ್ಯಾಮೋಹ ಮತ್ತು ಬಲವಂತಿಕೆಯ ಹೇರಿಕೆ ಮಾತೃ ಭಾಷೆ ಮತ್ತು ಸ್ಥಳೀಯ ಭಾಷಾ ಕಲಿಕಾರ್ಥಿಗಳಿಗೆ ಕಷ್ಟಕರವಾಗಿದ್ದು, ಅಂತಹ ಕಲಿಕಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.ಹೀಗೆ ಶಿಕ್ಷಣ ವಂಚಿತ ಯುವ ಮನಸ್ಸುಗಳು ನಿರುದ್ಯೋಗ್ಯ ಸಮಸ್ಯೆಯನ್ನು ಎದುರಿಸುವುದರೊಂದಿಗೆ ಕೆಳ ದರ್ಜೆಯ ಹುದ್ದೆಗಳನ್ನು ನಿರ್ವಹಿಸಬೇಕಾಗುತ್ತದೆ. ಅದು ಕೆಲಮಟ್ಟಿಗೆ ಅವಮಾನೀಯ ಸಂಗತಿ.

ಶಿಕ್ಷಣ ನೀತಿಗಳ ರಚನೆ ಮತ್ತು ಜಾರಿಯಲ್ಲಿ ಅಸ್ಪಷ್ಟತೆ:– ಈ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಮನ್ವಯತೆಯ ಕೊರತೆ, ಗುಣಮಟ್ಟದ ಪಠ್ಯಗಳ ನವೀಕರಣದಲ್ಲಿ ರಾಜಕೀಯ ಗೊಂದಲಗಳು, ಜೀವನುಪಯೋಗಿ ಪಠ್ಯಗಳ ಹೊರತಾದ ಕಲಿಕೆ ಮತ್ತು ಆ ಬಗ್ಗೆ ವಿದ್ಯಾರ್ಥಿಗಳಿಗೆ ನಿರಾಸಕ್ತಿ ಹಾಗೂ ಸೃಜನಶೀಲತೆಯ ಕಲಿಕೆ ಇಲ್ಲದಿರುವಿಕೆಯು ಶೈಕ್ಷಣಿಕ ಅವಕಾಶಗಳನ್ನು ಬಳಸಿಕೊಳ್ಳುವ ಕಲಿಕಾರ್ಥಿಗಳಿಗೆ ಸಂಕಷ್ಟಗಳು ಎದುರಾಗುತ್ತವೆ.

ಜಾಗತೀಕರಣದ ತ್ವರಿತ ಬೆಳವಣಿಗೆ:– ಇದರನ್ವಯ ಪಾಶ್ಚಾತ್ಯ ಶಿಕ್ಷಣದ ಪ್ರಭಾವ ಅಧಿಕಗೊಂಡು ಭಾರತೀಯ ಸಾಂಸ್ಕೃತಿಕ ಮೌಲ್ಯಗಳ ಸಂಘರ್ಷಕ್ಕೆ ಅನುವುಮಾಡಿತು. ಪ್ರತಿಭಾ ಪಲಾಯನ, ದುಬಾರಿ ಶಿಕ್ಷಣ, ಸರ್ಕಾರಿ ಮತ್ತು ಖಾಸಗಿ ಶಿಕ್ಷಣದ ನಡುವೆ ಕಂದಕಗಳು, ಡಿಜಿಟಲ್ ಶಿಕ್ಷಣದ ವಿಸ್ತರಣೆಯಲ್ಲಿ ಹಿನ್ನಡೆ ಇತ್ಯಾದಿ ಪರಿಣಾಮಕಾರಿ ಸವಾಲುಗಳನ್ನು ಜಾಗತೀಕರಣವುಸೃಷ್ಟಿಸಿತು. ಇದು ಶೈಕ್ಷಣಿಕ ಅಭಿವೃದ್ಧಿಯನ್ನು ಕುಂಠಿತಗೊಳಿಸಿತು.

ಬಾಲಕಾರ್ಮಿಕತೆ ಮತ್ತು ಲಿಂಗ ಅಸಮಾನತೆ:–ಗ್ರಾಮೀಣ ಪ್ರದೇಶ ಸೇರಿದಂತೆ ಪಟ್ಟಣದ ಜನ ದಟ್ಟನೆಯ ಸ್ಥಳಗಳಲ್ಲಿನ ಜನಸಮುದಾಯ ಬಡತನದ ಭವಣೆಯಿಂದ ಮುಕ್ತವಾಗಲು ಚಿಕ್ಕ ವಯಸ್ಸಿನಲ್ಲಿಯ ಕಲಿಕೆಗೆ ಇತಿಶ್ರೀ ಹಾಕಿ ಉದ್ಯೋಗ್ಯವನ್ನು ಅರಸುತ್ತಾರೆ. ಇದು ಸಾರ್ವಜನಿಕ ಶಿಕ್ಷಣಕ್ಕೆ ಹಿನ್ನಡೆಯನ್ನು ಉಂಟುಮಾಡಿದೆ. ಬಡತನ ಮತ್ತು ಅಂದಶ್ರದ್ದೆಯ ಮನಃಸ್ಥಿತಿಯ ಪೋಷಕರು ಹೆಣ್ಣು ಮಕ್ಕಳನ್ನು ಕಲಿಕಾವಕಾಶಕ್ಕೆ ನಿರ್ಭಂದಿಸುವ ಸಾಧ್ಯತೆಗಳು ಅಪರಿಮಿತವಿದೆ.

ವಾಣಿಜ್ಯೀಕರಣ:–ಪ್ರಸ್ತುತ ಶಿಕ್ಷಣವು ಸೇವಾ ವಲಯದಿಂದ ವಾಣಿಜ್ಯ ವಲಯಕ್ಕೆ ವರ್ಗಾಹಿತವಾಗಿದೆ. ವಿದ್ಯಾರ್ಥಿಗಳನ್ನು ಮುಂದಿಟ್ಟು ಕೊಂಡು ಖಾಸಗಿ ಶಿಕ್ಷಣ ಸಂಸ್ಥೆಗಳು ಪೋಷಕರಿಗೆ ದುಬಾರಿ ಶುಲ್ಕಗಳನ್ನು ವಿಧಿಸುವ ಮೂಲಕ ಶಿಕ್ಷಣದ ಮೂಲ ಉದ್ದೇಶವನ್ನು ಕಡೆಗಣಿಸಲಾಗಿದೆ. ಸಮಾನ ಶಿಕ್ಷಣದ ಅವಕಾಶಗಳು ಕುಂಠಿತಗೊಂಡಿದೆ. ಇದಕ್ಕೆ ಸರ್ಕಾರದ ಖಾಸಗೀಕರಣದ ಉತ್ತೇಜನವು ಕಾರಣವಾಗಿದ್ದುಹಾಗಾಗಿ ಶಿಕ್ಷಣ ಮಾರುವ–ಕೊಳ್ಳುವ ಸರಕಾಗಿದೆ.

ಮೌಲ್ಯಾಧಾರಿತ ಶಿಕ್ಷಣದ ಕೊರತೆ:–ಇಂದಿನ ಶಿಕ್ಷಣವು ಅಂಕ ಮತ್ತು ಉದ್ಯೋಗ ಕೇಂದ್ರಿತವಾಗಿದ್ದು. ಹಾಗಾಗಿ ಮೂಲ ಶಿಕ್ಷಣದಲ್ಲಿ ಇಂದು ಮಾನವೀಯ ಮೌಲ್ಯಗಳು. ನೈತಿಕತೆ ಮತ್ತು ಸಾಮಾಜಿಕ ಜವಾಬ್ದಾರಿಗಳ ಆಧಾರಿತ ತಿಳುವಳಿಕೆಯ ಶಿಕ್ಷಣದ ಪಠ್ಯಗಳು ಕಡಿಮೆಯಾಗಿವೆ. ಅದನ್ನು ತೆಗೆದುಕೊಳ್ಳುವ ಮನಃಸ್ಥಿತಿಯಲ್ಲಿ ಮಕ್ಕಳು ಹಾಗೂ ಪೋಷಕರು ತಯಾರಿಲ್ಲ. ಇದರಿಂದ ಭವಿಷ್ಯದ ಜಾಗೃತ ನಾಗರಿಕನನ್ನು ನೋಡಲು ಸಾಧ್ಯವಿಲ್ಲ.

ಬಹುಕೇಂದ್ರಿತ ಶಿಕ್ಷಣ ಪದ್ಧತಿ:–ಶೈಕ್ಷಣಿಕ ಮನೋವಿಜ್ಞಾನವು ವಿದ್ಯಾರ್ಥಿಗಳಿಗೆ ವಿವಿಧ ಕಲಿಕಾ ಹಂತದಲ್ಲಿ ಪಠ್ಯಕೇಂದ್ರಿತ, ಶಿಕ್ಷಕಕೇಂದ್ರಿತ, ಶಾಲಾಕೇಂದ್ರಿತ ಅಧ್ಯಾಯನಗಳನ್ನು ತಿಳಿಸಿದೆ. ಆದರೆ ಕಡಿಮೆ ಅವಧಿಯಲ್ಲಿ ಹೆಚ್ಚು ಜ್ಞಾನ ಸಂಪಾದನೆಯ ದಾವಂತದಲ್ಲಿ ಮಕ್ಕಳು ಹಾಗೂ ಪೋಷಕರ ಒತ್ತಾಸೆಯಿಂದಾಗಿ ಕಲಿಕಾಮಾದರಿ ವಿಧಾನಗಳು ದಾರಿತಪ್ಪಿವೆ. ಪೂರಕವಾಗಿ ಖಾಸಗಿ ಶಿಕ್ಷಣವು ಬಹುಕೇಂದ್ರಿತ ಕಲಿಕೆಗೆ ಮುಂದಾಗಿದ್ದು ಇದು ಸರಿಮಾರ್ಗದ ಕಲಿಕೆಗೆ ತೊಡಕಾಗಿದೆ.

ಭಾರತದಲ್ಲಿ ಶೈಕ್ಷಣಿಕ ಅಸ್ಮಿತೆಯ ಮೇಲಿನ ಸವಾಲುಗಳಿಗೆ ಪರಿಹಾರಗಳು:–

ಭಾರತದ ಸಂವಿಧಾನವು ಎಲ್ಲರನ್ನು ಒಳಗೊಳ್ಳುವ ಸಮಗ್ರ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿದೆ. ವೈವಿಧ್ಯತೆಯ ಭಾರತದಲ್ಲಿ ಅದನ್ನು ಸುಲಭವಾಗಿ ಜಾರಿಗೆ ತರವುದು ಕಷ್ಟ–ಸಾಧ್ಯ.ಈ ನಿಟ್ಟಿನಲ್ಲಿ ಪ್ರಯತ್ನಗಳು ಮತ್ತು ಸುಧಾರಣೆಗಳು ಕಡಿಮೆಯಿಲ್ಲ. ಉದಾಹರಣೆಗೆ ಇದುವರೆಗೆ ಬಂದಂತಹ ರಾಷ್ಟ್ರೀಯ ಶಿಕ್ಷಣ ನೀತಿಗಳು, ತಜ್ಞರ ಸಲಹೆಗಳು, ತಿದ್ದುಪಡಿಗಳು ಇತ್ಯಾದಿ. ಈ ನಡುವೆ ಸ್ವಾತಂತ್ರ ಪೂರ್ವ ಮತ್ತು ನಂತರದ ಭಾರತದ ಶೈಕ್ಷಣಿಕ ಅಸ್ಮಿತೆಯ ಮೇಲಿನ ಸವಾಲುಗಳಿಗೆ ಹಲವು ಪರಿಹಾರಗಳನ್ನು ಗುರುತಿಸಿದ್ದು ಮುಖ್ಯವಾದವುಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ.

- ಸುಲಭದ ಕಲಿಕೆಗಾಗಿ ಪ್ರಾಥಮಿಕ ಶಿಕ್ಷಣವನ್ನು 'ಮಾತೃಭಾಷೆ'ಯಲ್ಲಿ ನೀಡುವುದು ಮತ್ತು'ಸ್ಥಳೀಯ ಭಾಷೆ'ಗಳಲ್ಲಿ ಶಿಕ್ಷಣವನ್ನು ಬಲಪಡಿಸುವುದು ಇದನ್ನು "2020ರ ರಾಷ್ಟ್ರೀಯ ಶಿಕ್ಷಣ ನೀತಿ" ಪ್ರೋತ್ಸಾಹಿಸಿದೆ.
- ಗ್ರಾಮೀಣ ಮತ್ತು ನಗರದ ವಿದ್ಯಾರ್ಥಿಗಳ ನಡುವೆ ಕಲಿಕೆಯ ಅಂತರವನ್ನು ಕಡಿಮೆ ಮಾಡಿ ಗುಣಮಟ್ಟದ ಕಲಿಕೆಗಾಗಿ "ತಂತ್ರಜ್ಞಾನ ಆಧಾರಿತ ಶಿಕ್ಷಣ"ವನ್ನು ನೀಡುವುದು.ಅಂದರೆ 'ಡಿಜಿಟಲ್ ಲರ್ನಿಂಗ್ ಪ್ಲಾಟ್ ಫಾರ್ಮ್‌ಗಳು, ಸ್ಮಾರ್ಟ್ ಕ್ಲಾಸ್ ರೂಮ್‌ಗಳು, ಆನ್‌ಲೈನ್ ಕೋರ್ಸ್‌ಗಳನ್ನು' ಬಳಸುವುದು.
- ವಿದ್ಯಾರ್ಥಿಗಳು ಭವಿಷ್ಯದ ನಾಗರಿಕ ಜವಾಬ್ದಾರಿಯುತವನ್ನು ಅರಿಯಲು ನೈತಿಕ ಮೌಲ್ಯಗಳನ್ನೊಳಗೊಂಡ "ಮೌಲ್ಯಾಧಾರಿತ ಶಿಕ್ಷಣವನ್ನು" ನೀಡುವುದು. ಅದರಲ್ಲಿ ಜಾಗೃತ ಜೀವನ ನಿರ್ವಹಣೆಯ ಪಠ್ಯರಚನೆಗಳಿರಬೇಕು.
- ಸ್ವಾವಲಂಬಿ ಬದುಕನ್ನು ಕಟ್ಟಲು ಮತ್ತು ಬಹುವಿತ ಉದ್ಯೋಗ ನೀಡಬಲ್ಲ "ಕೌಶಲ್ಯಾಧಾರಿತ ಶಿಕ್ಷಣ" ಲಭ್ಯವಾಗಬೇಕು.ಇದಕ್ಕೆ ಪೂರಕವಾದ ಶಾಲಾ–ಕಾಲೇಜುಗಳುನ್ನು ತೆರೆಯುವುದುಹಾಗೂ ಜನರಲ್ ಎಜುಕೇಷನ್‌ನಲ್ಲಿ ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು.
- ವೈಯಕ್ತಿಕ ಕಾರಣಗಳಿಂದ ಕಲಿಕೆಯಿಂದ ವಂಚಿತರಾದ ಹಾಗೂ ಅರ್ಧದಲ್ಲಿ ಕಲಿಕೆಯನ್ನು ನಿಲ್ಲಿಸುವ ವಿದ್ಯಾರ್ಥಿಗಳನ್ನು "ಕಲಿಕೆಯ ಮುಖ್ಯವಾಹಿನಿಗೆ" ತರುವುದು.ಓಪನ್ ಲರ್ನಿಂಗ್, ಪೋಷಕರ ಜಾಗೃತಿ, ಆನ್‌ಲೈನ್ ಕಲಿಕೆ ಮುಂತಾದವುಗಳಿಂದ.
- ಬದಲಾದ ಕಲಿಕೆಯ ವ್ಯವಸ್ಥೆಗೆ ಹೊಂದಿಕೊಳ್ಳುವ ಆಧುನಿಕ ವಿಧಾನದಡಿ ತರಬೇತಿ ಪಡೆದ "ಗುಣಮಟ್ಟದ ಶಿಕ್ಷಕರನ್ನು" ರೂಪಿಸುವುದು, 'ಕೊರತೆಯಲ್ಲಿರುವ ಹಾಗೂ ಖಾಲಿ ಶಿಕ್ಷಕ' ಹುದ್ದೆಗಳನ್ನು ನಿಯಮಿತವಾಗಿ ಭರ್ತಿಮಾಡುವುದು.
- ದಿನಮಾನಗಳಿಗೆ ಹೊಂದಿಕೊಳ್ಳುವ "ಆಧುನಿಕ ಪಠ್ಯಕ್ರಮ" ರಚನೆಯಾಗಬೇಕು. ಅದು 'ರಾಜಕೀಯ ಪ್ರೇರಿತ' ವಾಗಿಬಾರದು. ಎಲ್ಲೇ ಮೀರಿದ ಪಾಶ್ಚಾತ್ಯ ಶಿಕ್ಷಣಕ್ಕೆ ಅವಕಾಶವಿರದ, ಪರಂಪರೆ, ಜ್ಞಾನಾಧಾರಿತ,ಉದ್ಯೋಗ ಸೃಷ್ಟಿಸುವ ಅಥವಾ ನೀಡಬಲ್ಲ ಪಠ್ಯವಿರಬೇಕು.
- ಸಾರ್ವತ್ರಿಕವಾಗಿ ಸರ್ವಕಾಲಿಕವಾಗಿ ಸಾರ್ವಜನಿಕರೆಲ್ಲಾರು ಒಪ್ಪಿಕೊಳ್ಳುವಂತಹ "ರಾಷ್ಟ್ರೀಯ ಶಿಕ್ಷಣ ನೀತಿಗಳು" ಜಾರಿಯಾಗಬೇಕು. ಇಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಭಿನ್ನಾಭಿಪ್ರಾಯ ಇಲ್ಲದ ಹಾಗೂ ಉದ್ದೇಶಿತವಾಗಿ ಇಂತಹ ನೀತಿಗಳನ್ನು ಹೇರುವ ಪ್ರಯತ್ನವಾಗಬಾರದು.
- ಕಲಿಯುವವನ ಮತ್ತು ಕಲಿಸುವವರ ನಡುವೆ "ಸಂವೇದನಾ ಶೀಲತೆಯ ಭಾವನೆ" ಮೂಡಬೇಕು. ಅಲ್ಲಿ ಅಂಕ ಮತ್ತು ಉದ್ಯೋಗದ ಹೆಚ್ಚುಗಾರಿಕೆ ಪ್ರಮಾಣ ಕಡಿಮೆಯಲ್ಲಿದ್ದು. ಸಮೂಹ ಸಹಭಾಗಿತ್ವದ ಶಿಕ್ಷಣ ವಿದ್ಯಾರ್ಥಿಗಳಿಗೆ ಲಭ್ಯವಾಗಬೇಕು.

- ಪ್ರಸ್ತುತ ಉದ್ಯೋಗಾವಕಾಶಗಳು 'ಸ್ಪರ್ಧಾತ್ಮಕ ಜ್ಞಾನ'ದ ಮೇಲೆ ನಿಂತಿದೆ. ಹಾಗಾಗಿ ಮೂಲ ಶಿಕ್ಷಣದಲ್ಲಿ ಇದಕ್ಕೆ ಹೆಚ್ಚು ಒತ್ತು ನೀಡಬೇಕು. ಈ ವಿಚಾರವಾಗಿ ವಿದ್ಯಾರ್ಥಿಗಳಲ್ಲಿ "ಮನೋಗ್ರಹಿಕಾ"ಸಾಮರ್ಥ್ಯ ಬಲಗೊಳ್ಳಬೇಕು.
- ಕಲಿಸುವಿಕೆಗೆ 'ಹೊಸ ಬೋಧನಾ ವಿಧಾನಗಳ' ಬಳಕೆ ಮತ್ತು ಶಿಕ್ಷಣದ ವಿಷಯಕ್ಕೆ ಸಂಬಂಧಿಸಿದಂತೆ ನಿಯಮಿತವಾಗಿ "ಗುಣಮಟ್ಟದ ಸಂಶೋಧನೆಗಳು"ನಡೆಯಬೇಕು. ಅದಕ್ಕೆ ಸೂಕ್ತಾರ್ಹ ಪ್ರೋತ್ಸಾಹಗಳು ಸರ್ಕಾರ ಮತ್ತು ಸರ್ಕಾರೇತರ ವ್ಯವಸ್ಥೆಗಳಿಂದ ಲಭಿಸಬೇಕು.
- ಶಿಕ್ಷಣವು ಅನುತ್ಪಾದಕ ವಲಯವೆನ್ನುವ ಸರ್ಕಾರಗಳು ಅದರ ಘನ ಉದ್ದೇಶ ಈಡೇರಿಸುವಲ್ಲಿ ಒದಗಿಸಬೇಕಾದ "ಸಂಪನ್ಮೂಲ ಮತ್ತು ಅನುದಾನಗಳಲ್ಲಿ" ವ್ಯತ್ಯಸ್ಥ ಮಾಡಬಾರದು ಮೊದಲ ಪ್ರಾಶಸ್ತ್ಯದಲ್ಲಿ ಸಾಕಷ್ಟು ಸ್ಥಿರ ಮತ್ತು ಚರ ಸೌಲಭ್ಯಗಳನ್ನು ನೀಡಬೇಕು.
- ಶಿಕ್ಷಣದ ಮೂಲ ಉದ್ದೇಶ 'ಪ್ರಜ್ಞಾವಂತ ನಾಗರಿಕನನ್ನು' ರೂಪಿಸುವುದು, ಈ ಸಂಬಂಧ ಕಲಿಯುವ ಮನಸ್ಸುಗಳನ್ನು, ಕಲಿಸುವವರನ್ನು, ಕಲಿಸುವುದಕ್ಕೆ ಸೌಲಭ್ಯಗಳನ್ನು ನೀಡುವವರನ್ನು ಜಾಗೃತಗೊಳಿಸುವ ಮತ್ತು ಈ ವಿಚಾರವಾಗಿ ಸರಿ–ತಪ್ಪುಗಳನ್ನು ತಿದ್ದಿ ಪ್ರಚಾರಿಸುವ ಶುದ್ಧ ಮತ್ತು ಸತ್ಯ 'ಮಾಧ್ಯಮಗಳು' ಅಗತ್ಯ ಸಂಖ್ಯೆಯಲ್ಲಿ ಕಾರ್ಯ ಪ್ರವೃತರಾಗಬೇಕು.
- ಕಾಲ–ಕಾಲಕ್ಕೆ ಶೈಕ್ಷಣಿಕ ತಜ್ಞರ ಅಭಿಪ್ರಾಯ ಆಧರಿಸಿ ಸರ್ಕಾರ ಸಂವಿಧಾನಿಕವಾಗಿ"ಶೈಕ್ಷಣಿಕ ತಿದ್ದುಪಡಿಗಳನ್ನು" ತರಬೇಕು. ಅಂತಹ ತಿದ್ದುಪಡಿಗಳ ವಿಚಾರಗಳು ಜನರಿಗೆ ಸರಳಾರ್ಥದಲ್ಲಿ ತಲುಪಬೇಕು. ಆ ಮೂಲಕ ಶೈಕ್ಷಣಿಕ ಸೌಲಭ್ಯಗಳು ಸರ್ಕಾರಿಯುತವಾಗಿ ಜಾರಿಯಾಗಬೇಕು.

ಉಪಸಂಹಾರ:–

ಬಹುಭಾಷಾ, ಬಹುಸಾಂಸ್ಕೃತಿಕತೆ ಮತ್ತು ಜಾತ್ಯಾತೀತ ಭಾರತದ ಸಮಾಜದಲ್ಲಿ"ಶೈಕ್ಷಣಿಕ ಅಸ್ಮಿತೆಯು" ಭಾರತೀಯರ ವ್ಯಕ್ತಿತ್ವವನ್ನು ರೂಪಿಸುವುದರ ಜೊತೆಗೆ "ಸಾಮಾಜಿಕ ನ್ಯಾಯ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು" ಬಲಪಡಿಸುವುದರಲ್ಲಿ ಪ್ರಮುಖ ಸಾಧನವಾಗಿದೆ. ಸಂವಿಧಾನವು ಎಲ್ಲಾ ನಾಗರಿಕರಿಗೆ ಸಮಾನ ಶಿಕ್ಷಣದ ಅವಕಾಶ ಒದಗಿಸುವ ಉದ್ದೇಶ ಹೊಂದಿದೆ. ಈ ನಿಟ್ಟಿನಲ್ಲಿ ಸಂವಿಧಾನದ 21/ಎ ವಿಧಿಯು "ಭಾರತೀಯರ ಶಿಕ್ಷಣದ ಖಚಿತತೆ"ಯಲ್ಲಿ ಮಹತ್ವದ ಹೆಗ್ಗುರುತು.ಈ ಖಚಿತತೆಯು ಕಟ್ಟಕಡೆಯ ಫಲಾನುಭವಿಗೆ ಬಹುನಿರೀಕ್ಷಿತ ಮಟ್ಟದಲ್ಲಿ ಸುಲಭವಾಗಿ ತಲುಪುವ ತುರ್ತುಯಿದೆ.

ಎಲ್ಲಾ ಕಾಲಘಟ್ಟದಲ್ಲೂ ಏರುಗತಿಯ ಬೆಳವಣಿಗೆಯನ್ನು ಶಿಕ್ಷಣವು ಭಾರತದಲ್ಲಿ ಕಂಡರು ಹಾಗೂ ಸರ್ಕಾರ ಮತ್ತು ಸಂವಿಧಾನಿಕತೆಯು ಈ ವಿಚಾರವಾಗಿ ಸಾಕಷ್ಟು ಬದಲಾವಣೆಯ ಕ್ರಮಗಳನ್ನು ತೆಗೆದುಕೊಂಡಿದ್ದರು.ಆದರ ಸವಾಲುಗಳು ಕಡಿಮೆಯೇನಿಲ್ಲ. ಪೂರಕವಾಗಿ ಪರಿಹಾರಗಳು ಸಹನಿಗದಿತ ಪ್ರಮಾಣದಲ್ಲಿದೆ. ಇಲ್ಲಿ ಸವಾಲು ಮತ್ತು ಪರಿಹಾರಗಳಿಗೆ ಕೊನೆಯಿಲ್ಲ. ಅವುಗಳ ನಡುವೆ ಸರ್ಕಾರ, ಸಂಸ್ಥೆಗಳು, ನಾಗರಿಕರು ಅವುಗಳನ್ನು ಸರಿದೂಗಿಸಿಕೊಂಡು ಹೋಗುವ ಮನಃಸ್ಥಿತಿಗೆ ಬರಬೇಕು.

"ಶೈಕ್ಷಣಿಕ ಅಸ್ಮಿತೆ ಎಂದರೆ ಕೇವಲ ವಿದ್ಯಾಭ್ಯಾಸವಲ್ಲ. ಅದು ವ್ಯಕ್ತಿಯ ಭಾಷೆ, ಜ್ಞಾನ, ಸಂಸ್ಕೃತಿ, ಪರಂಪರೆ, ನೈತಿಕ ಮೌಲ್ಯ ಹಾಗೂ ಸಾಮಾಜಿಕ ಹಿನ್ನೆಲೆಯನ್ನು ಒಳಗೊಂಡ ಒಂದು ವ್ಯಕ್ತಿತ್ವ." ಶಿಕ್ಷಣ ಇದೆಲ್ಲವನ್ನು ಉತ್ತೇಜಿಸುವ ಸಾಧನ. ಭಾರತದ ಶೈಕ್ಷಣಿಕ ಅಸ್ಮಿತೆಯು ಸಂವಿಧಾನದ ಅವಕಾಶದಡಿಯಲ್ಲಿ ಜಾಗೃತವಾಗಬೇಕಾದರೆ ಇಲ್ಲಿ ಹಿಂದುಳಿದ ವರ್ಗಗಳಿಗೆ, ತಳಮಟ್ಟದ ಸಮುದಾಯಗಳಿಗೆ, ಅಲ್ಪಸಂಖ್ಯಾಂತರಿಗೆ, ಗ್ರಾಮೀಣ ಭಾಗದವರಿಗೆ, ಮಹಿಳೆಯರಿಗೆ ಶೈಕ್ಷಣಿಕ ಸೌಲಭ್ಯಗಳು ಸೂಕ್ತಾರ್ಹ ವಿಧಾನದಡಿ ಮೀಸಲಾತಿ ವ್ಯವಸ್ಥೆಗಳ ಕೆಳಗೆ ಸಮಾನ ಅವಕಾಶವಾಗಬೇಕು.

ಪರಾಮರ್ಶನಗಳು:

ಶಿಕ್ಷಣ ಮತ್ತು ಸಮಾಜ–ಎಂ. ಎನ್ ಶ್ರೀನಿವಾಸ

ಭಾರತದ ಶಿಕ್ಷಣ ವ್ಯವಸ್ಥೆ– ಕೃಷ್ಣಕುಮಾರ್

ಭಾರತೀಯ ಶಿಕ್ಷಣದ ಇತಿಹಾಸ–ಜೆ. ಪಿ ನಾಯಕ್

ಭಾರತದಲ್ಲಿ ಸಂವಿಧಾನ ಒಂದು ಪರಿಚಯ–ಸುಭಾಷ್ ಕಶ್ಯಪ್.

ಭಾರತದ ಸಂವಿಧಾನ ಪರಿಚಯ ದುರ್ಗಾದಾಸ್ ಬಸು (ಕನ್ನಡ ಅನುವಾದ)

ಭಾರತದ ಶಿಕ್ಷಣ ನೀತಿಗಳು – ಭಾರತ ಸರ್ಕಾರದ ಶಿಕ್ಷಣದ ಇಲಾಖೆಯ ಪ್ರಕಟಣೆಗಳು.

ಪಿ. ಎಸ್ ಗಂಗಾಧರ್ ಭಾರತ ಸಂವಿಧಾನ ಮತ್ತು ರಾಜಕೀಯ (11ನೇ ಪರಿಷ್ಕೃತ ಆವೃತ್ತಿ–2015) ಚೈತ್ರ ಪ್ರಕಾಶನ.

ಡಾ. ಹೆಚ್. ಎಂ ರಾಜಶೇಖರ ಭಾರತ ಸಂವಿಧಾನ ಮತ್ತು ಸರ್ಕಾರ (1950 ರಿಂದ) (14ನೇ ಪರಿಷ್ಕೃತ ಆವೃತ್ತಿ 2015) ಕಿರಣ್ ಪ್ರಕಾಶನ.

Education and social Change in India –By A.R. Desai

Indian Education in the Emerging Society-By J.C. Agharwal

Introduction to the Constitution of India- D.D Basu

Education in India Society, Policy and Practice- By Krishna Kumar.

B.L.Fadia 2005, Indian Government and Politics, Sahithya Bhavana Publications

M Lakshikanth 2016, Indian Polity(5$^{th}$ Ed) M C Graw hill education Publication

H.M. Rajashekhar 2013, Indian Government and Politics, Kiran Prakashan Mysore.